ಮಾಡಲಾಗುತ್ತದೆ ಈ ಕಾರ್ಖಾನೆಯ ನಿರ್ಮಾಣ ಕಾರ್ಯ ಪೂರ್ಣವಾಗಿರುತ್ತದೆ

ಆ) ಈ ಕೈಗಾರಿಕೆಗೆ ರಾಜ್ಯ ಸರ್ಕಾರದಿಂದ ಯಾವ ಹಣ ಬಿಡುಗಡೆಯಾಗಿರುವುದಿಲ್ಲ ಈ ಯೋಜನೆಯ ಒಟ್ಟು ಮೊತ್ತ ರೂ 363 10 ಲಕ್ಷಗಳಲ್ಲಿ ಕೇಂದ್ರ ಸರ್ಕಾರದ ಅಸೈಡ್ ಯೋಜನೆಯಡಿ ರೂ 120 ಲಕ್ಷ ಬಿಡುಗಡೆಯಾಗಿರುತ್ತದೆ ಹಾಗೂ ಉಳಿದ ಹಣ ರೂ 243 10 ಲಕ್ಷಗಳನ್ನು STCI, ಹಾಗೂ ಸ್ಪೈಸ್ ಬೋರ್ಡ್ ಭರಿಸಿರುತ್ತದೆ ಇಲ್ಲಿಯವರೆಗೆ ಕಾರ್ಖಾನೆಗೆ ರೂ 251 53 ಲಕ್ಷಗಳನ್ನು ಖರ್ಚು ಮಾಡಿದೆ ಬಾಕಿ ರೂ 111 77 ಲಕ್ಷಗಳನ್ನು ಸೆಪ್ಟೆಂಬರ್ 2007ರ ಒಳಗಾಗಿ ಖರ್ಚು ಮಾಡಲಾಗುವುದು

ಇ) ಉತ್ಪಾದನೆಯು ಪ್ರಾಯೋಗಿಕ ಹಂತದಲ್ಲಿದೆ ಮತ್ತು ವಾಣಿಜ್ಯ ಉತ್ಪಾದನೆಯನ್ನು ಸೆಪ್ಟೆಂಬರ್ 2007 ರಿಂದ ಪ್ರಾರಂಭಿಸಲಾಗುತ್ತದೆ

ಈ) ಈ ಕಾರ್ಖಾನೆಯ ಶೇ 90 ರಷ್ಟು ಸ್ವಯಂಚಾಲಿತವಾಗಿದೆ ಮತ್ತು ಖಾಯಂ ತಾಂತ್ರಿಕ ಪರಿಣಿತವುಳ್ಳ ಉದ್ಯೋಗಿಗಳು ಬೇಕಾಗಿರುತ್ತಾರೆ ಒಟ್ಟು ತಾಂತ್ರಿಕ ತಜ್ಞರನ್ನೊಳಗೊಂಡ 4 ಜನರಿಗೆ ಉದ್ಯೋಗ ನೀಡಲಾಗಿದೆ ಅದರಲ್ಲಿ 3 ಜನ ಸ್ಥಳೀಯರಾಗಿದ್ದಾರೆ

822 (1295) ಶ್ರೀ ಓಲೇಕಾರ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬ್ಯಾಡಗಿಯಲ್ಲಿ ನಿರ್ಮಿಸಲಾಗುತ್ತಿರುವ ಮಿನಿ ವಿಧಾನಸೌಧದ ಕೆಲಸ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಕಾಮಗಾರಿಗೆ ಈವರೆಗೆ ಖರ್ಚು ಮಾಡಲಾದ ಹಣವೆಷ್ಟು, ಇನ್ನೂ ಖರ್ಚು ಮಾಡಬೇಕಾಗಿರುವ ಹಣವೆಷ್ಟು,

ಇ) ಈ ಕಾಮಗಾರಿಗೆ ಸಾದಾ ಇಟ್ಟಿಗೆಗಳನ್ನು ಬಳಸಿರುವುದನ್ನು ಹೌಸಿಂಗ್ ಬೋರ್ಡನವರಾಗಲಿ ಇಲಾಖೆಯವರಾಗಲಿ ಏಕೆ ಪರಿಶೀಲನೆ ಮಾಡಿರುವುದಿಲ್ಲ,

ಈ) ಹಾಗಿದ್ದಲ್ಲ, ಈ ಬಗ್ಗೆ ಸರ್ಕಾರದ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ದೂರು ಬಂದಿರುತ್ತದೆ

ಆ) ಈ ಕಾಮಗಾರಿಗೆ ಈವರೆಗೂ ರೂ 78,63,313 ಗಳನ್ನು ಖರ್ಚು ಮಾಡಲಾಗಿದ್ದು, ಇನ್ನೂ ರೂ 74,16,832 ಖರ್ಚು ಮಾಡಲು ಬಾಕಿ ಇರುತ್ತದೆ

ಇ) ಈ ಕಾಮಗಾರಿಗೆ ಬಳಸಿರುವ ಇಟ್ಟಿಗೆಗಳ ಗುಣಮಟ್ಟದ ಬಗ್ಗೆ ಪರೀಕ್ಷೆ ಮಾಡಿಸಿ ಇಟ್ಟಿಗೆಗಳ ಗುಣಮಟ್ಟವು ನಿಗದಿತ ಮಿತಿಯೊಳಗಾಗಿ ಇರುವುದಾಗಿ ರಾಣೆಬೆನ್ನೂರಿನ ಎಸ್ ಟಿ ಜೆ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆ, ಮೆ ಕರ್ನಾಟಕ ಟೆಸ್ಟ್ ಹೌಸ್ ಪ್ರೈ ಲಿ, ಮೆಟೀರಿಯಲ್ ಟೆಸ್ಟಿಂಗ್ ಲ್ಯಾಬೊರೇಟರಿ,

ಬೆಂಗಳೂರು ಮತ್ತು ಬಿ ವಿ ಭೂಮರೆಡ್ಡಿ ಕಾಲೇಜ್ ಆಫ್ ಇಂಜಿನಿಯರಿಂಗ್ ಸಂಸ್ಥೆಗಳಿಂದ ದೃಢೀಕರಿಸಲ್ಪಟ್ಟಿರುತ್ತದೆ

ಈ) ಈ ಮೇಲಿನ ವಿವರಗಳಿಂದಾಗಿ ಈ ಕಟ್ಟಡದ ಕಾಮಗಾರಿಯು ಕಳಪೆಯಾಗಿರುವುದಿಲ್ಲ ಹಾಗೂ ಇದು ಪ್ರಗತಿಯಲ್ಲಿದೆ

823 (1296) ಶ್ರೀ ಓಲೇಕಾರ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿ ಅಕ್ರಮ ಮಜೂರಾತಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ಅದರಲ್ಲಿ ಪರಿಶಿಷ್ಟ ಪಂಗಡದ ಅರ್ಜಿಗಳ ಸಂಖ್ಯೆ ಎಷ್ಟು ಯಾವಾಗ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು, (ಜಿಲ್ಲಾವಾರು ಮಾಹಿತಿ ಒದಗಿಸುವುದು);

ಆ) ರಾಜ್ಯದಲ್ಲಿ ಇನ್ನೂ ಎಷ್ಟು ತಾಲ್ಲೂಕುಗಳಲ್ಲಿ ಅಕ್ರಮ ಸಕ್ರಮ ಸಮಿತಿಗಳನ್ನು ರಚಿಸಬೇಕಾಗಿದೆ, ಇದನ್ನು ರಚಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

ಅ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಎ ಮತ್ತು 94ಬಿ ಅಡಿಯಲ್ಲಿ ಸ್ವೀಕರಿಸಲಾದ ಒಟ್ಟು ಅರ್ಜಿಗಳ ಸಂಖ್ಯೆ.21,85,635 ಅದರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅರ್ಜಿಗಳ ಸಂಖ್ಯೆ 5,60,062 ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಬಾಕಿ ಇರುವ ಅರ್ಜಿಗಳ ಕುರಿತು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳ ಮುಂದೆ ಮಂಡಿಸಿ ಇತ್ಯರ್ಥಪಡಿಸಲಾಗುವುದು ಅರ್ಜಿಗಳನ್ನು ಇತ್ಯರ್ಥಪಡಿಸುವ ಅಂತಿಮ ದಿನಾಂಕವನ್ನು ಕಾಯ್ದೆಗೆ ತಿದ್ದುಪಡಿ ತಂದು ದಿನಾಂಕ-26 04 2008ರ ವರೆಗೆ ವಿಸ್ತರಿಸಲಾಗಿದೆ

ಆ) 54 ತಾಲ್ಲೂಕುಗಳಿಗೆ ಅಕ್ರಮ ಸಕ್ರಮ ಸಮಿತಿಗಳನ್ನು ರಚಿಸಬೇಕಾಗಿದೆ ಈ ತಾಲ್ಲೂಕುಗಳಿಗೆ ಸಮಿತಿಗಳನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ಅನುಬಂಧ

ಕ್ರ ಸಂ	ಜಿಲ್ಲೆ	ನಮೂನೆ-50ರಲ್ಲಿ ಸ್ವೀಕರಿಸಲಾದ ಒಟ್ಟು ಅರ್ಜಿಗಳು	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರ ಒಟ್ಟು ಅರ್ಜಿಗಳು	ನಮೂನೆ-53ರಲ್ಲಿ ಸ್ವೀಕರಿಸಲಾದ ಒಟ್ಟು ಅರ್ಜಿಗಳು	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರ ಒಟ್ಟು ಅರ್ಜಿಗಳು
1	ಮೈಸೂರು	55354	17642	57247	16658
2	ಚಾಮರಾಜನಗರ	20280	6747	13706	4327

F34